ಇ) ಟೆಂಡರ್ ಕರೆದು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲು ಅಂದಾಜು 3 ತಿಂಗಳು ಕಾಲಾವಧಿ ಬೇಕಾಗುವುದು.

ನಾಲೆಯಲ್ಲಿ ಹೆಚ್ಚಿನ ನೀರು

1140(2049); ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ)

ಅ) ಹುಬ್ಬಳ್ಳಿ–ಧಾರವಾಡ ಪೂರ್ವ ಮತ ಕ್ಷೇತ್ರದಲ್ಲಿ ಸುಮಾರು 12 ಕಿ.ಮೀ ಉದ್ದ ನಾಲೆ ಇದ್ದು, ಅತೀ ಮಳೆಯಿಂದಾಗಿ ನಾಲೆಗೆ ಹೆಚ್ಚು ನೀರು ಬರುವುದರಿಂದ ಸುತ್ತ ಮುತ್ತಲಿನ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಪ್ರತಿ ವರ್ಷ ಮಳೆಗಾಲ ಪ್ರಾರಂಭವಾಗುವ ಮುಂಚಿತವಾಗಿ ನಾಲೆಯಲ್ಲಿಯ ಹೂಳನ್ನು ತೆಗೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.